ವೈದ್ಯರನ್ನು ನೇಮಕಾತಿ ಮಾಡಲಾಗಿದೆ. ಮತ್ತೊಂದು ಖಾಲಿ ಹುದ್ದೆಯನ್ನು ಆದಷ್ಟು ಜಾಗ್ರತೆ ತುಂಬಲು ಕ್ರಮ ಕೈಗೊಳ್ಳಲಾಗುವುದು.

ಆ) ಪುತ್ತೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಒಂದು ಉಪ ಶಸ್ತ್ರ ಚಿಕಿತ್ಸಕರ ಹುದ್ದೆ ಖಾಲಿ ಇದ್ದು ಈ ಹುದ್ದೆಯನ್ನು ಹಾಗೂ ಉಪ್ಪಿನಂಗಡಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಖಾಲಿ ಇರುವ ಹುದ್ದೆಯನ್ನು ತುಂಬಲು ಸಾರ್ವಜನಿಕ ವರ್ಗಾವಣೆ ಸಮಯದಲ್ಲಿ ಕ್ರಮ ಕೈಗೊಳ್ಳಲಾಗುವುದು.

ಕಾಲೇಜುಗಳಲ್ಲಿ ಉಪನ್ಯಾಸಕರ ಹುದ್ದೆ ಭರ್ತಿ ಮಾಡುವ ಬಗ್ಗೆ

1233 - ಶ್ರೀ ಪ್ರತಾಪ್‌ಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕುಂದಾಪುರ ಕ್ಷೇತ್ರದ ಈ ಕೆಳಗಿನ ಜೂನಿಯರ್‌ಕಾಲೇಜುಗಳಲ್ಲಿ ಗೋಳಿ ಅಂಗಡಿ, ಶಂಕರನಾರಾಯಣ, ಬಿದ್ಕಲಕಟ್ಟೆ, ಕೋಟೇಶ್ವರ. ಕುಂದಾಪುರ ಇವುಗಳಲ್ಲಿ ಕೊರತೆಯಿರುವ ಉಪನ್ಯಾಸಕರ ಸಂಖ್ಯೆ ಎಷ್ಟು?*

ಆ) *ಮಂಜೂರಾದ ಉಪನ್ಯಾಸಕರ ಸಂಖ್ಯೆ ಎಷ್ಟು?*

ಶ್ರೀ ಹೆಚ್.ಜಿ. ಗೋವಿಂದೆಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):

ಅ)

ಗೊಳಿಯಂಗಡಿ	1
ಶಂಕರನಾರಾಯಣ	1
ಬಿದ್ಕಲಕಟ್ಟೆ	-
ಕೋಟೇಶ್ವರ	1
ಕುಂದಾಪುರ	1

ಆ)

ಗೊಳಿಅಂಗಡಿ	7
ಶಂಕರನಾರಾಯಣ	10
ಬಿದ್ಕಲಕಟ್ಟೆ	10
ಕೋಟೇಶ್ವರ	11
ಕುಂದಾಪುರ	9
	47

ಇ) ದಿನಾಂಕ 29-03-1995ರಲ್ಲಿ 477 ಜನ ಪ್ರೌಢ ಶಾಲಾ ಸಹಶಿಕ್ಷಕರಿಗೆ ಉಪನ್ಯಾಸಕರಾಗಿ ಸ್ಥಾನವನ್ನು ಬಡ್ತಿ ನೀಡಲಾಗದ್ದು, ಖಾಲಿ ಇರುವ ಹುದ್ದೆಗಳನ್ನು ತುಂಬಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಪ್ರೌಢ ಶಾಲೆಗಳಲ್ಲಿ ಖಾಲಿಯಿರುವ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವುದರ ಬಗ್ಗೆ

1234 - ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕಂದಾಪುರ ಕ್ಷೇತ್ರದ ಆರ್ಡಿ. ಗೋಳಿಯಂಗಡಿ. ಆಮಸೆಬೈಲು. ಶಂಕರನಾರಾಯಣ, ಹೊಸಂಗಡಿ, ಆಂಡಾರು, ಕೋಟೇಶ್ವರ, ಬನ್ಸೂರು, ಕುಂದಾಪುರ, ಹಾಲ್ಹಾಡಿ, ಕೆದೂರು, ವಕ್ವಾಡಿ, ಪೇಳೂರು ಈ ಸ್ಥಳಗಳಲ್ಲಿರುವ ಪ್ರೌಢ ಶಾಲೆಗಳಲ್ಲಿ ಕೊರತೆಯಿರುವ ಅಧ್ಯಾಪಕರ ಸಂಖ್ಯೆ ಎಷ್ಟು?*